# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 190 (288)

ಸದಸ್ಯರ ಹೆಸರು : ಶ್ರೀ ಕೇಶವ ಪ್ರಸಾದ್ ಎಸ್
(ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು)

ಉತ್ತರಿಸುವ ಸಚಿವರು : ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

ಉತ್ತರಿಸಬೇಕಾದ ದಿನಾಂಕ : 18.08.2026

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಒಟ್ಟು ಹಾಪ್ ಕಾಮ್ಸ್ ಮಳಿಗೆಗಳ ಸಂಖ್ಯೆ ಎಷ್ಟು; ಪ್ರಸ್ತುತ ಎಷ್ಟು ಮಳಿಗೆಗಳು ವಹಿವಾಟು ನಡೆಸುತ್ತಿವೆ; ಎಷ್ಟು ಮಳಿಗೆಗಳನ್ನು ಮುಚ್ಚಲಾಗಿದೆ; ಮುಚ್ಚಿದ್ದಲ್ಲಿ, ಇದಕ್ಕೆ ಕಾರಣಗಳೇನು; (ಜಿಲ್ಲಾವಾರು ಮಾಹಿತಿ ನೀಡುವುದು.) | ರಾಜ್ಯದಲ್ಲಿ ಒಟ್ಟು 542 ಹಾಪ್‌ಕಾಮ್ಸ್ ಮಳಿಗೆಗಳು ಇರುತ್ತವೆ. ಪ್ರಸ್ತುತ 431 ಮಳಿಗೆಗಳು ವಹಿವಾಟು ನಡೆಸುತ್ತಿವೆ. ಇದರಲ್ಲಿ 111 ಮಳಿಗೆಗಳನ್ನು ಮುಚ್ಚಲಾಗಿದೆ.<br><br>ಜಿಲ್ಲಾವಾರು ಮಳಿಗೆಗಳ ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ.<br><br><u>ಹಾಪ್‌ಕಾಮ್ಸ್ ಮಳಿಗೆಗಳು ಮುಚ್ಚಲು ಕಾರಣಗಳು ಕೆಳಕಂಡಂತಿವೆ:</u><br><br>1. ಜನಸಂದಣಿ ಇರದ ಪ್ರದೇಶಗಳಲ್ಲಿ ಹೆಚ್ಚು ವ್ಯಾಪಾರ ವಹಿವಾಟು ನಡೆಯದೇ ಇರುವುದರಿಂದ ಹಾಗೂ ಖಾಸಗಿಯವರು ರಸ್ತೆ ಬದಿಗಳಲ್ಲಿ/ಅಂಗಡಿಗಳಲ್ಲಿ ಹಣ್ಣು-ತರಕಾರಿ ಮಾರಾಟ ಮಾಡುತ್ತಿರುವುದರಿಂದ ವ್ಯಾಪಾರ ವಹಿವಾಟು ಕಡಿಮೆಯಾಗಿ ಮಳಿಗೆಗಳನ್ನು ಮುಚ್ಚಲಾಗಿದೆ.<br>2. ಬೆಂಗಳೂರಿನ ಪ್ರತಿಷ್ಠಿತ ಮಾಲ್ ಗಳು, ಖಾಸಗಿ ಆನ್ ಲೈನ್ ಮಾರುಕಟ್ಟೆಗಳಿಂದ ಪೈಪೋಟಿ ಉಂಟಾಗಿರುತ್ತದೆ.<br>3. ಬೆಂಗಳೂರು/ಮೈಸೂರು ಹಾಗೂ ಇನ್ನಿತರೆ ಹಾಪ್ ಕಾಮ್ಸ್ ನೌಕರರು ಹೆಚ್ಚಿನ ಪ್ರಮಾಣದಲ್ಲಿ ನಿವೃತ್ತಿ ಹೊಂದಿರುತ್ತಾರೆ. ಇದರಿಂದಾಗಿ ನೌಕರರ ಕೊರತೆ ಉಂಟಾಗಿ ಮಳಿಗೆಗಳನ್ನು ಮುಚ್ಚಲಾಗಿರುತ್ತದೆ.<br>4. ರಸ್ತೆಯ ಅಗಲೀಕರಣ/ಮೆಟ್ರೋ ಕಾಮಗಾರಿಯಿಂದಾಗಿ ಮಳಿಗೆಗಳನ್ನು ಕೆಡವಲಾಗಿರುತ್ತದೆ.<br>5. ಸಿಬ್ಬಂದಿ ಕೊರತೆ, ಮೂಲಸೌಕರ್ಯದ ಕೊರತೆ, ಖಾಸಗಿ ಆನ್‌ಲೈನ್ ಮಾರುಕಟ್ಟೆಗಳ ಪೈಪೋಟಿಯೂ ಸೇರಿದಂತೆ ಹಾಪ್‌ಕಾಮ್ಸ್ ಮಳಿಗೆಗಳನ್ನು ಮುಚ್ಚಲು ಕಾರಣಗಳಾಗಿವೆ. |

| | | |
|---|---|---|
| ಆ) | ಹಾಪ್ ಕಾಮ್ಸ್ ಮಳಿಗೆಗಳಲ್ಲಿ ಯಾವ ಯಾವ ಪದಾರ್ಥಗಳನ್ನು ಮಾರಾಟಮಾಡಬೇಕೆಂಬ ನಿಯಮವಿದೆಯೇ; ಇದ್ದಲ್ಲಿ, ಪದಾರ್ಥಗಳ ಸಮೇತ ಪೂರ್ಣ ಮಾಹಿತಿ ನೀಡುವುದು; | ಹೌದು ನಿಯಮವಿದೆ.<br><br>ಆಯಾ ಜಿಲ್ಲಾ ಹಾಪ್ ಕಾಮ್ಸ್ ಗಳ ಉಪವಿಧಿಯಲ್ಲಿ ಅವಕಾಶ ಕಲ್ಪಿಸಿಕೊಂಡಿರುವ ಈ ಕೆಳಕಂಡ ಪದಾರ್ಥಗಳನ್ನು ಹಾಪ್ ಕಾಮ್ಸ್ ಮಳಿಗೆಗಳಲ್ಲಿ ಮಾರಾಟ ಮಾಡಲಾಗುತ್ತಿದೆ.<br><br>1. ತೋಟಗಾರಿಕೆ ಉತ್ಪನ್ನಗಳಾದ ವಿವಿಧ ಹಣ್ಣುಗಳು, ತರಕಾರಿಗಳು, ಸೊಪ್ಪುಗಳು, ಅಣಬೆ, ಸಾಂಬಾರು ಪದಾರ್ಥಗಳು ಇತ್ಯಾದಿ.<br>2. ಸಂಸ್ಥೆಯಲ್ಲಿ ಜೇನು ತುಪ್ಪ, ಬಿಸ್ಕೆಟ್, ಚಿಪ್ಸ್, ಜ್ಯೂಸ್, ಐಸ್ ಕ್ರೀಮ್, ಸಾಂಬಾರ್ ಪದಾರ್ಥಗಳು, ಕೆ.ಓ.ಎಫ್ ಸಂಸ್ಥೆಯ ಅಡಿಗೆ ಎಣ್ಣೆ ಇತ್ಯಾದಿಗಳು ಮತ್ತು ಕ್ಯಾಂಪ್ಕೊ ಸಂಸ್ಥೆಯ ವಿವಿಧ ಬಗೆಯ ಕಂಪನಿಯ ಉತ್ಪನ್ನಗಳನ್ನು ಮತ್ತು ವಿವಿಧ ಕಂಪನಿಗಳ ಉತ್ಪನ್ನಗಳಾದ ಸಿರಿಧಾನ್ಯಗಳು ಮತ್ತು ಕುಡಿಯುವ ನೀರು ಹಾಗೂ ಉತ್ತರ ಕರ್ನಾಟಕದ ಪದಾರ್ಥಗಳು. |
| ಇ) | ಪ್ರಸ್ತುತ ಎಷ್ಟು ಸಿಬ್ಬಂದಿಗಳು ಹಾಪ್ ಕಾಮ್ಸ್ ಮಳಿಗೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ; ಖಾಲಿ ಇರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಸಿಬ್ಬಂದಿಯ ಕೊರತೆಯಿಂದ ಮಳಿಗೆಗಳಲ್ಲಿ ಕೆಲಸ ಕಾರ್ಯಕ್ಕೆ ತೊಂದರೆಯಾಗುತ್ತಿಲ್ಲವೆ? (ಜಿಲ್ಲಾವಾರು ಮಾಹಿತಿ ನೀಡುವುದು.) | ಪ್ರಸ್ತುತ 430 ಸಿಬ್ಬಂದಿಗಳು ಹಾಪ್ ಕಾಮ್ಸ್ ಮಳಿಗೆಗಳಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ.<br><br>ಖಾಲಿ ಇರುವ ಸಿಬ್ಬಂದಿಗಳ ಸಂಖ್ಯೆ 389, ಜಿಲ್ಲಾವಾರು ಮಾಹಿತಿಯನ್ನು ಅನುಬಂಧ - 2 ರಲ್ಲಿ ಒದಗಿಸಿದೆ.<br><br>ಸಿಬ್ಬಂದಿಯ ಕೊರತೆಯಿಂದ ಸಂಸ್ಥೆಯ ದಿನನಿತ್ಯದ ಕೆಲಸಕಾರ್ಯಕ್ಕೆ ತೊಂದರೆಯಾಗದಂತೆ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳನ್ನು ನೇಮಕ ಮಾಡಿಕೊಂಡು ಹಾಗೂ ಕೆಲವು ಫ್ರಾಂಚೈಸಿ ಆಧಾರದ ಮೇಲೆ, ಹಾಗೂ ಕೆಲವು ಜಿಲ್ಲಾ ಹಾಪ್ ಕಾಮ್ಸ್ ಮಳಿಗೆಗಳಲ್ಲಿ ಕಮೀಷನ್ ಏಜೆಂಟರುಗಳನ್ನು ನೇಮಕಮಾಡಿಕೊಂಡು ಕಾರ್ಯ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ. |

ಸಂಖ್ಯೆ: HORTI 439 HGM 2026

(ಎಸ್. ಎಸ್. ಮಲ್ಲಿಕಾರ್ಜುನ್)
ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

## ಅನುಬಂಧ-1

## ರಾಜ್ಯದಲ್ಲಿನ ಜಿಲ್ಲಾವಾರು ಹಾಪ್ ಕಾಮ್ಸ್ ಮಳಿಗೆಗಳ ವಿವರಗಳು

| ಕ್ರ. ಸಂ. | ಜಿಲ್ಲಾ ಹಾಪ್ ಕಾಮ್ಸ್ ಹೆಸರು | ಒಟ್ಟು ಹಾಪ್ ಕಾಮ್ಸ್ ಮಳಿಗೆಗಳ ಸಂಖ್ಯೆ | ವಹಿವಾಟು ನಡೆಸುತ್ತಿರುವ ಮಳಿಗೆಗಳ ಸಂಖ್ಯೆ | ಮುಚ್ಚಲ್ಪಟ್ಟ ಮಳಿಗೆಗಳ ಸಂಖ್ಯೆ |
|---|---|---|---|---|
| 1 | ಬೆಂಗಳೂರು | 269 | 193 | 76 |
| 2 | ಶಿವಮೊಗ್ಗ | 41 | 40 | 1 |
| 3 | ಚಿತ್ರದುರ್ಗ | 19 | 17 | 2 |
| 4 | ತುಮಕೂರು | 14 | 10 | 4 |
| 5 | ದಾವಣಗೆರೆ | 10 | 9 | 1 |
| 6 | ಮೈಸೂರು | 42 | 37 | 5 |
| 7 | ದಕ್ಷಿಣ ಕನ್ನಡ ಮತ್ತು ಉಡುಪಿ | 17 | 14 | 3 |
| 8 | ಮಂಡ್ಯ | 16 | 11 | 5 |
| 9 | ಕೊಡಗು | 3 | 3 | - |
| 10 | ಚಿಕ್ಕಮಗಳೂರು | 2 | 2 | 0 |
| 11 | ಹಾಸನ | 9 | 8 | 1 |
| 12 | ಚಾಮರಾಜನಗರ | 8 | 8 | 0 |
| 13 | ಕಲ್ಬುರ್ಗಿ ಮತ್ತು ಯಾದಗಿರಿ | 12 | 11 | 1 |
| 14 | ರಾಯಚೂರು | 5 | 5 | - |
| 15 | ಬಳ್ಳಾರಿ | 3 | 3 | 0 |
| 16 | ಕೊಪ್ಪಳ | 9 | 9 | 0 |
| 17 | ಬೀದರ್ | 2 | 0 | 2 |
| 18 | ಬೆಳಗಾವಿ | 8 | 5 | 3 |
| 19 | ವಿಜಯಪುರ | 22 | 16 | 6 |
| 20 | ಶಿರಸಿ | 11 | 11 | - |
| 21 | ಧಾರವಾಡ | 10 | 9 | 1 |
| 22 | ಹಾವೇರಿ | 1 | 1 | 0 |
| 23 | ಬಾಗಲಕೋಟೆ | 1 | 1 | - |
| 24 | ಗದಗ | 8 | 8 | 0 |
| | ಒಟ್ಟು | 542 | 431 | 111 |

## ಅನುಬಂಧ-2

## ಜಿಲ್ಲಾ ಹಾಪ್ ಕಾಮ್ಸ್ ಮಳಿಗೆಗಳಲ್ಲಿನ ಸಿಬ್ಬಂದಿಗಳ ವಿವರಗಳು

| ಕ್ರ. ಸಂ. | ಜಿಲ್ಲಾ ಹಾಪ್ ಕಾಮ್ಸ್ ಹೆಸರು | ಮಾರಾಟ ಮಳಿಗೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಪ್ ಕಾಮ್ಸ್ ಸಿಬ್ಬಂದಿಗಳ ಸಂಖ್ಯೆ | ಖಾಲಿ ಇರುವ ಸಿಬ್ಬಂದಿಗಳ ಸಂಖ್ಯೆ |
|---|---|---|---|
| 1 | ಬೆಂಗಳೂರು | 290 | 325 |
| 2 | ಶಿವಮೊಗ್ಗ | ಕಮೀಷನ್ ಆಧಾರದ ಮೇಲೆ ನೀಡಲಾಗಿದೆ | - |
| 3 | ಚಿತ್ರದುರ್ಗ | - | - |
| 4 | ತುಮಕೂರು | - | - |
| 5 | ದಾವಣಗೆರೆ | 18 | - |
| 6 | ಮೈಸೂರು | 33 | 64 |
| 7 | ದಕ್ಷಿಣ ಕನ್ನಡ ಮತ್ತು ಉಡುಪಿ | 28 | - |
| 8 | ಮಂಡ್ಯ | 22 | - |
| 9 | ಕೊಡಗು | 14 | - |
| 10 | ಚಿಕ್ಕಮಗಳೂರು | ಕಮೀಷನ್ ಆಧಾರದ ಮೇಲೆ ನೀಡಲಾಗಿದೆ | - |
| 11 | ಹಾಸನ | 8 | - |
| 12 | ಚಾಮರಾಜನಗರ | ಕಮೀಷನ್ ಆಧಾರದ ಮೇಲೆ ನೀಡಲಾಗಿದೆ | |
| 13 | ಕಲ್ಬುರ್ಗಿ ಮತ್ತು ಯಾದಗಿರಿ | ಕಮೀಷನ್ ಆಧಾರದ ಮೇಲೆ ನೀಡಲಾಗಿದೆ | - |
| 14 | ರಾಯಚೂರು | 5 | - |
| 15 | ಬಳ್ಳಾರಿ | ಕಮೀಷನ್ ಆಧಾರದ ಮೇಲೆ ನೀಡಲಾಗಿದೆ | - |
| 16 | ಕೊಪ್ಪಳ | ಕಮೀಷನ್ ಆಧಾರದ ಮೇಲೆ ನೀಡಲಾಗಿದೆ | - |
| 17 | ಬೀದರ್ | - | - |
| 18 | ಬೆಳಗಾವಿ | ಕಮೀಷನ್ ಆಧಾರದ ಮೇಲೆ ನೀಡಲಾಗಿದೆ | - |
| 19 | ವಿಜಯಪುರ | ಹಾಪ್ ಕಾಮ್ಸ್ ಮಳಿಗೆಗಳನ್ನು ಗುತ್ತಿಗೆ ಹಾಗೂ ಕಮೀಷನ್ ಆಧಾರದ ಮೇಲೆ ನೀಡಲಾಗಿದೆ | - |
| 20 | ಶಿರಸಿ | 11 | - |
| 21 | ಧಾರವಾಡ | ಕಮೀಷನ್ ಆಧಾರದ ಮೇಲೆ ನೀಡಲಾಗಿದೆ | - |
| 22 | ಹಾವೇರಿ | - | - |
| 23 | ಬಾಗಲಕೋಟೆ | - | - |
| 24 | ಗದಗ | 1 | - |
| | ಒಟ್ಟು | 430 | 389 |